ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

## ಕುಡಿಯುವ ನೀರಿನ ಕೊರತೆಯಿಂದ ಬಳಲುತ್ತಿದ್ದ ಸಿದ್ಧನಕೊಪ್ಪಲು ಗ್ರಾಮಸ್ಥರಿಗೆ ಆಶಾಕಿರಣವಾದ

# ಜಲ ಜೀವನ್ ಮಿಷನ್ ಯೋಜನೆ



ಗ್ರಾಮೀಣ ಪ್ರದೇಶದ ಪ್ರತಿ ಕುಟುಂಬದ, ಪ್ರತಿ ವ್ಯಕ್ತಿಗೂ ಶುದ್ಧ ಕುಡಿಯುವ ನೀರು ಸಿಗಬೇಕು ಎಂಬ ಮಹದುದ್ದೇಶದಿಂದ ಪ್ರಾರಂಭಗೊಂಡ ಯೋಜನೆಯೇ ಜಲಜೀವನ್ ಮಿಷನ್. ಶುದ್ಧ ಕುಡಿಯುವ ನೀರಿನ ಕೊರತೆಯಿಂದ ಹಲವಾರು ಜನರು ಎದುರಿಸುತ್ತಿದ್ದ ಸಮಸ್ಯೆಗೆ ಜಲಜೀವನ್ ಮಿಷನ್ ಪರಿಹಾರವಾಗಿದೆ. ಇಂತಹ ಗ್ರಾಮಗಳಲ್ಲಿ ಸಿದ್ಧನಕೊಪ್ಪಲು ಗ್ರಾಮ ಕೂಡ ಒಂದು.

ಮೈಸೂರು ಜಿಲ್ಲೆಯಲ್ಲಿರುವ ಸಿದ್ಧನಕೊಪ್ಪಲು ಗ್ರಾಮದಲ್ಲಿ 590 ಕುಟುಂಬಗಳಿದ್ದು 42 ಕುಟುಂಬಗಳು, 25 ಪರಿಶಿಷ್ಠ ಪಂಗಡ ಕುಟುಂಬಗಳು ಹಾಗೂ ಇತರೇ 523 ಕುಟುಂಗಳಿವೆ.

ಸಿದ್ಧನಕೊಪ್ಪಲು ಗ್ರಾಮಸ್ಥರು ಈ ಮೊದಲು ಕುಡಿಯುವ ನೀರಿನ ಕೊರತೆಯಿಂದ ಸಾಕಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದರು. ಅವೈಜ್ಞಾನಿಕ ಪೈಪ್ ಲೈನ್ ಅಳವಡಿಕೆಯಿಂದ ಮಹಿಳೆಯರು 10ಅಡಿ ಆಳದಿಂದ ನೀರನ್ನು ಹಿಡಿಯುವ ಪರಿಸ್ಥಿತಿ ಇತ್ತು. ಕೆಲವು ಸಂದರ್ಭಗಳಲ್ಲಿ ನಳ ಇರುವ ಗುಂಡಿಗೆ ಮಳೆ ಹಾಗೂ ಚರಂಡಿ ನೀರು ಸೇರಿ ಅದು ಪೈಪ್ ಲೈನ್ ಒಳಗೆ ಹೋಗಿ ಕಲುಷಿತ ನೀರನ್ನು ಕುಡಿಯುವ ಸಂಕಷ್ಟದ ಪರಿಸ್ಥಿತಿಗಳು ಎದುರಾಗಿದ್ದವು.

ಶುದ್ಧ ಕುಡಿಯುವ ನೀರಿನ ಕನಸು ಇನ್ನು ಮುಂದೆ ಕನಸಾಗೇ ಉಳಿಯಲಿದೆ ಎಂದು ನಿರಾಸೆಗೊಂಡಿದ್ದ ಗ್ರಾಮಸ್ಥರ ಬದುಕಲ್ಲಿ ಭರವಸೆ ತುಂಬಿದ್ದು ಜಲಜೀವನ್ ಮಿಷನ್. ಈ ಯೋಜನೆಯಡಿ ಕಾರ್ಯಾತ್ಮಕ ನಳದ ಮುಖಾಂತರ ಕುಡಿಯುವ ನೀರು ಮನೆಬಾಗಿಲಿಗೆ ಬರಲಿದೆ ಎಂದು ಅರಿತ ಗ್ರಾಮಸ್ಥರಿಗೆ ತಮ್ಮ ಸಮಸ್ಯೆಗೆ ಪರಿಹಾರ ದೊರಕಿತು ಎಂಬ ನಂಬಿಕೆ ಬಂದಿತ್ತು.



ಆದರೆ ಈ ಯೋಜನೆಯನ್ನು ಅನುಷ್ಠಾನಗೊಳಿಸುವುದು ಅಂದುಕೊಂಡಷ್ಟು ಸುಲಭವಾಗಿರಲಿಲ್ಲ. ಜಲಜೀವನ್ ಮಿಷನ್ ಯೋಜನೆಯನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಸಾಕಷ್ಟು ಸವಾಲುಗಳು ಎದುರಾಗಿದ್ದವು.

## ಅನುಷ್ಠಾನದ ಸಂದರ್ಭದಲ್ಲಿ ಎದುರಾದ ಪ್ರಮುಖ ಸವಾಲುಗಳು:

ಬ್ಯಾಡರಹಳ್ಳಿ ಗ್ರಾಮ ಪಂಚಾಯಿತಿಯ ಸಿದ್ಧನಕೊಪ್ಪಲು ಗ್ರಾಮಸ್ಥರಿಗೆ ಜಲಜೀವನ್ ಮಿಷನ್ ಯೋಜನೆಯ ಅನುಷ್ಠಾನದ ಕುರಿತು ಸಾಕಷ್ಟು ಗೊಂದಲಗಳಿದ್ದವು.

- ಜೆಜೆಎಂ ಅಡಿ ಕೇವಲ ಮನುಷ್ಯರಿಗೆ ಶುದ್ಧ, ಸುರಕ್ಷಿತ ನೀರು ಒದಗಿಸಲಾಗುವುದು, ಜಾನುವಾರುಗಳಿಗೆ ನೀಡಲಾಗುವುದಿಲ್ಲ.
- 55 ಲೀಟರ್ (ಒಬ್ಬ ವ್ಯಕ್ತಿಗೆ) ನೀರನ್ನು ಒದಗಿಸಿದ ನಂತರ ಹೆಚ್ಚು ಪ್ರಮಾಣದ ನೀರನ್ನು ಒದಗಿಸಲಾಗುವುದಿಲ್ಲ.
- ಮೀಟರ್ ಅಳವಡಿಕೆಯಿಂದ ಹೆಚ್ಚು ನೀರನ್ನು ಬಳಸಿದಂತೆ ಶುಲ್ಕ ಕಟ್ಟುವುದು ಹೆಚ್ಚಾಗುತ್ತದೆ.
- ಸಮುದಾಯ ವಂತಿಕೆ ಗ್ರಾಮಸ್ಥರಿಗೆ ಹೊರೆ ಎನಿಸುತ್ತದೆ.
- ಓವರ್ ಹೆಡ್ ಟ್ಯಾಂಕ್ ನಿರ್ಮಿಸಲು ಗ್ರಾಮ ಪಂಚಾಯಿತಿಯು ಜಾಗ ನೀಡುವುದಿಲ್ಲ. ಟ್ಯಾಂಕ್ ನಿರ್ಮಾಣವಾದರೆ ಹೆಚ್ಚು ಪ್ರಮಾಣದ ನೀರನ್ನು ಒದಗಿಸುವುದಿಲ್ಲ ಎಂಬೆಲ್ಲ ಗೊಂದಲಗಳಿದ್ದವು.

## ಸವಾಲುಗಳನ್ನು ಎದುರಿಸಲು ತೆಗೆದುಕೊಂಡ ಕ್ರಮ/ವಿಧಾನ:

ಈ ಎಲ್ಲಾ ಸವಾಲುಗಳನ್ನು ಎದುರಿಸಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಪ್ರಮುಖ ನಡೆಗಳನ್ನು ತೆಗೆದುಕೊಳ್ಳಲಾಯಿತು. ಮೈಸೂರು ಜಿ.ಪಂ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ ಹಾಗೂ ಭಗೀರಥ ಸಂಸ್ಥೆಯ ಸಹಯೋಗದೊಂದಿಗೆ ಗ್ರಾಮಸ್ಥರಿಗಾಗಿ ಮಾಹಿತಿ, ಶಿಕ್ಷಣ ಮತ್ತು ಸಂವಹನ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಚಟುವಿಕೆಗಳಾದ ಗ್ರಾಮ ಕ್ರಿಯಾ ಯೋಜನೆ, ವಿಶೇಷ ಗ್ರಾಮ ಸಭೆ, ಕಿರುಚಿತ್ರ ಪ್ರದರ್ಶನ, ಗ್ರಾಮ ನೀರು ಮತ್ತು ನೈರ್ಮಲ್ಯ ಸದಸ್ಯರುಗಳಿಗೆ ತರಬೇತಿ, ಅರಿವು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿತ್ತು.

## ಪ್ರಮುಖ ಸಾಧನೆಗಳು:

ಜಲಜೀವನ್ ಮಿಷನ್ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಫಲವಾಗಿ ಕಷ್ಟಪಟ್ಟು ನೀರು ಹಿಡಿಯುವ ಮಹಿಳೆಯರ ಬದುಕು ಹಸನಾಯಿತು. ಇದರ ಜೊತೆಗೆ ಮೀಟರ್ ಅಳವಡಿಕೆಯಿಂದ, ನೀರನ್ನು ಅತಿಯಾಗಿ ಪೋಲು ಮಾಡುವ ಸಮಸ್ಯೆಗೆ ಪರಿಹಾರ ಸಿಕ್ಕಿದೆ. ಗ್ರಾಮ ಪಂಚಾಯಿತಿಯ ಪಿ.ಡಿ.ಓ ಒಳಗೊಂಡಂತೆ ಎಲ್ಲಾ ಸಿಬ್ಬಂದಿಗಳ ಅವಿರತ ಶ್ರಮ ಹಾಗೂ ಉತ್ತಮ ತಂತ್ರಗಾರಿಕೆಯಿಂದ 50 ಸಾವಿರಕ್ಕೂ ಅಧಿಕ ಸಮುದಾಯ ವಂತಿಕೆಯನ್ನು ಸಂಗ್ರಹಣೆ ಮಾಡಲಾಗಿದೆ.

ಸ್ವಚ್ಛ ಸಂಕೀರ್ಣ · ಜಲೋತ್ಸವ · ಮನೆ ಮನೆಗೆ ಗಂಗೆ ಜಲ ಜೀವನ್ ಮಿಷನ್

ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳಿದ್ದಲ್ಲಿ ಕರೆ ಮಾಡಿ: 9480985555